**<u>ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ 29-10-2021</u>**

**ಪಾಟೀ ಸವಾಲು - 2 ಮತ್ತು 3ನೇ ಪ್ರತಿವಾದಿಗಳ ಪರ ಶ್ರೀ. ಎಂ.ವಿ.ಜಿ., ವಕೀಲರಿಂದ**

7) ವಾದಿ ನಂ.1(ಬಿ) ಮತ್ತು (ಸಿ) ನನ್ನ ಅಣ್ಣಂದಿರು ಎಂದರೆ ಸರಿ. ವಾದಿ ನಂ.1(ಎ) ನನ್ನ ತಾಯಿ. ನನ್ನ ತಾತನ ಹೆಸರು ರಾಮದಾಸಪ್ಪ. ನನ್ನ ತಾತನಿಗೆ ನಾಲ್ಕು ಜನ ಗಂಡುಮಕ್ಕಳು, ಅವರ ಹೆಸರುಗಳು 1) ಕೊನೇರಪ್ಪ, 2) ವೆಂಕಟರಮಣಪ್ಪ, 3) ಕೃಷ್ಣಪ್ಪ ಮತ್ತು 4) ಅಯ್ಯಣ್ಣ. ನಾನು ರಾಮದಾಸಪ್ಪನ ಮೂರನೇ ಮಗ ಕೃಷ್ಣಪ್ಪನ ಮಗನೆಂದರೆ ಸರಿ. 2 ಮತ್ತು 3ನೇ ಪ್ರತಿವಾದಿಗಳು ರಾಮದಾಸಪ್ಪನ ಎರಡನೇ ಮಗ ವೆಂಕಟರಮಣಪ್ಪನ ಮಕ್ಕಳೆಂದರೆ ಸರಿ. ದಾವಾ ಸ್ವತ್ತಿನ ಸರ್ವೆ ನಂ.28 ಇರುತ್ತದೆ. ನಮಗೆ ಬಂದಿರುವ ಉಪ ನಂಬರ್ 28-6 ಇರುತ್ತದೆ. ಸದರಿ 28 ರಲ್ಲಿ ಹನ್ನೆರಡೂಕಾಲು ಗುಂಟೆ ನನ್ನ ತಂದೆ ಕೃಷ್ಣಪ್ಪನಿಗೆ ಪಾಲು ವಿಭಾಗದಲ್ಲಿ ಬಂದಿರುತ್ತದೆ. ನನ್ನತಂದೆಗೆ ಹನ್ನೆರಡೂಕಾಲು ಗುಂಟೆ ಪಿತ್ರಾರ್ಜಿತವಾಗಿ ಬಂದಿದ್ದು, ಇನ್ನೂ ಹನ್ನೆರಡೂಕಾಲು ಗುಂಟೆಯನ್ನು ನನ್ನ ತಂದೆ ನನ್ನ ಚಿಕ್ಕಪ್ಪ ಅಯ್ಯಣ್ಣನಿಂದ ಖರೀದಿ ಮಾಡಿದ್ದರು. ನನ್ನ ಚಿಕ್ಕಪ್ಪನ ಹೆಂಡತಿ ಮಕ್ಕಳು ಇರುತ್ತಾರೆ. ಅಯ್ಯಣ್ಣ 2006 ರಲ್ಲಿ ತನ್ನ ಭಾಗದ ಹನ್ನೆರಡೂಕಾಲು ಗುಂಟೆಯನ್ನು ನನ್ನ ತಂದೆಗೆ ಮಾರಾಟ ಮಾಡಿದರು. ನನ್ನ ಚಿಕ್ಕಪ್ಪ ಅಯ್ಯಣ್ಣ ಈಗಲೂ ಜೀವಂತವಿರುತ್ತಾರೆ. ಅಯ್ಯಣ್ಣನ ಜೊತೆ ಅವರ ಮಕ್ಕಳೂ ಕೂಡ

ಕ್ರಯಪತ್ರ ಬರೆದುಕೊಟ್ಟಿದ್ದಾರೆ, ಅವರ ಹೆಂಡತಿ ಮಾತ್ರ ಕ್ರಯಪತ್ರಕ್ಕೆ ಸಹಿ ಮಾಡಿಲ್ಲ. ನನ್ನ ಚಿಕ್ಕಪ್ಪ ಅಯ್ಯಣ್ಣನಿಗೆ ನಾಲ್ಕು ಜನ ಹೆಣ್ಣು ಮಕ್ಕಳು ಇದ್ದು, ಅವರಲ್ಲಿ ಕ್ರಯಪತ್ರಕ್ಕೆ ಇಬ್ಬರು ಭಾಗಿಯಾಗಿರಬಹುದು, ಮತ್ತಿಬ್ಬರು ಭಾಗಿಯಾಗಿಲ್ಲದೇ ಇರಬಹುದು. ಸರ್ವೆ ನಂ.28 ರಲ್ಲಿ ಒಟ್ಟು 1 ಎಕರೆ 36 ಗುಂಟೆ ಇದ್ದು, ಅದರಲ್ಲಿ ಮೂರು ಗುಂಟೆ ಖರಾಬು ಇರುತ್ತದೆ. ಖರಾಬು ಬಿಟ್ಟರೆ 1 ಎಕರೆ 33 ಗುಂಟೆ ಆಗುತ್ತದೆ. ಅದನ್ನು ನನ್ನ ತಾತ ರಾಮದಾಸಪ್ಪ ಕ್ರಯಕ್ಕೆ ಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ನನ್ನ ತಾತ ಚಂದ್ರಶೇಖರಯ್ಯ ಬಿನ್ ಸಿದ್ದಲಿಂಗಯ್ಯ ಎನ್ನುವವರಿಂದ ದಿ.10-08-1970 ರಂದು ಖರೀದಿ ಮಾಡಿದ್ದಾರೆ ಎಂದರೆ ಸರಿ. ನನ್ನ ತಾತ ಬದುಕಿದ್ದಾಗ ಆತನ ನಾಲ್ಕೂ ಜನ ಮಕ್ಕಳಿಗೆ ವಿಭಾಗ ಮಾಡಿಕೊಟ್ಟಿದ್ದರೇ? ಎಂದರೆ ವಿಭಾಗ ಮಾಡಿರಲಿಲ್ಲ. ನನ್ನ ತಂದೆ ಮತ್ತು ಅವರ ಅಣ್ಣ ತಮ್ಮಂದಿರು 1977 ರಲ್ಲಿ ವಿಭಾಗ ಮಾಡಿಕೊಂಡಿದ್ದಾರೆ. ಸದರಿ ವಿಭಾಗವನ್ನು ದೇವನಹಳ್ಳಿ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನೋಂದಣೆ ಮಾಡಿಸಿದ್ದಾರೆ. ನೋಂದಾಯಿತ ವಿಭಾಗ ಪತ್ರದಲ್ಲಿ ಎ, ಬಿ, ಸಿ ಮತ್ತು ಡಿ ಎಂದು ಷೆಡ್ಯೂಲ್ ನಮೂದಾಗಿದೆಯೇ? ಎಂದರೆ ಆಗಿದೆ. ಕೊನೇರಪ್ಪನ ಭಾಗಕ್ಕೆ ಹನ್ನೆರಡೂಕಾಲು ಗುಂಟೆ ಹೋಗಿದೆಯೇ?ಎಂದರೆ ಅದರ ಬಗ್ಗೆ ಗೊತ್ತಿಲ್ಲ. 2 ಮತ್ತು 3 ನೇ ಪ್ರತಿವಾದಿಗಳ ತಂದೆಗೆ ಕೂಡ ಹನ್ನೆರಡೂಕಾಲು ಗುಂಟೆ ಹೋಗಿದೆಯೇ? ಎಂದರೆ ಅವರ ತಂದೆಗೆ ಒಟ್ಟು 48 ಗುಂಟೆ ಹೋಗಿದೆ. ನನ್ನ ಪ್ರಕಾರ 2 ಮತ್ತು 3 ನೇ

ಪ್ರತಿವಾದಿಗಳ ತಂದೆಗೆ 1 ಎಕರೆ ಎಂಟೂವರೆ ಗುಂಟೆ ಹೋಗಿರುತ್ತದೆ. ಅದೇ ರೀತಿ ಅಯ್ಯಣ್ಣನಿಗೆ ಹನ್ನೆರಡೂಕಾಲು ಗುಂಟೆ ಹೋಗಿದೆ ಎಂದರೆ ಸರಿ. ಈ ಜಮೀನು ಚನ್ನಸಂದ್ರ ಗ್ರಾಮದಲ್ಲಿ ಇರುತ್ತದೆ. ದಾವಾ ಸ್ವತ್ತು ಅಂದರೆ ಇಪ್ಪತ್ನಾಲ್ಕೂವರೆ ಗುಂಟೆಗೆ ಚೆಕ್ಕುಬಂದಿ ಪೂರ್ವಕ್ಕೆ ಸರ್ವೆ ನಂ.208-1 ಮತ್ತು ಕೆ. ಮುನಿಶಾಮಪ್ಪನ ಜಮೀನು, ಪಶ್ಚಿಮಕ್ಕೆ ರಾಮಕೃಷ್ಣಪ್ಪನ ಜಮೀನು, ಉತ್ತರಕ್ಕೆ ನನ್ನ ದೊಡ್ಡಪ್ಪ ವೆಂಕಟರಮಣಪ್ಪನ ಮಕ್ಕಳ ಜಮೀನು ಮತ್ತು ದಕ್ಷಿಣಕ್ಕೆ ನನ್ನ ದೊಡ್ಡಪ್ಪ ವೆಂಕಟರಮಣಪ್ಪನ ಜಮೀನು ಇರುತ್ತವೆ. ದಾವಾ ಜಮೀನಿನ ಉತ್ತರ ಮತ್ತು ದಕ್ಷಿಣಕ್ಕೆ ಇರುವ ವೆಂಕಟರಮಣಪ್ಪ ಎಂದರೆ 2 ಮತ್ತು 3 ನೇ ಪ್ರತಿವಾದಿಗಳ ತಂದೆ ಎಂದರೆ ಸರಿ. ದಾವಾ ಸ್ವತ್ತು ಇಪ್ಪತ್ನಾಲ್ಕೂವರೆ ಗುಂಟೆಯಲ್ಲಿ ವಾದಿಗಳಾದ ನಾವು ಯಾವುದೇ ರೀತಿಯ ಹಕ್ಕು, ಸ್ವಾಧೀನ ಮತ್ತು ಸಾಗುವಳಿ ಹೊಂದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಜಯಶಂಕರ ನಮ್ಮ ಕುಟುಂಬ ಸದಸ್ಯನಲ್ಲ ಎಂದರೆ ಸರಿ. ಯಾವ ಕಾರಣಕ್ಕೆ 1 ನೇ ಪ್ರತಿವಾದಿಯನ್ನು ದಾವೆಗೆ ಸೇರಿಸಿದ್ದೀರಿ ಎಂದರೆ ನನ್ನ ದೊಡ್ಡಪ್ಪ ವೆಂಕಟರಮಣಪ್ಪನ ಮಗ 1 ನೇ ಪ್ರತಿವಾದಿಗೆ ಸೈಟ್ ಮಾರಾಟ ಮಾಡಿದ್ದಾನೆ, ಆದ್ದರಿಂದ ಸೇರಿಸಿದ್ದೇವೆ. ಸದರಿ ಸೈಟ್ ಅನ್ನು 2 ನೇ ಪ್ರತಿವಾದಿ ಮಾತ್ರ ಕ್ರಯ ಮಾಡಿಲ್ಲ, ಇನ್ನೂ ಹಲವಾರು ಜನ ಸೇರಿ 1 ನೇ ಪ್ರತಿವಾದಿಗೆ ಕ್ರಯ ಮಾಡಿದ್ದಾರೆ. 1 ನೇ ಪ್ರತಿವಾದಿಗೆ ಕ್ರಯ ಮಾಡಿರುವ ಸೈಟು ಎರಡೂಕಾಲು ಗುಂಟೆ ಇರುತ್ತದೆ. 1 ನೇ ಪ್ರತಿವಾದಿಗೆ ಕ್ರಯ ಮಾಡಿದವರಲ್ಲಿ ಇಬ್ಬರನ್ನು ಮಾತ್ರ ಈ ದಾವೆಗೆ

ಸೇರಿಸಿದ್ದೇವೆ, ಮತ್ತೊಬ್ಬ ಕ್ರಯದಾರ ನನ್ನ ದೊಡ್ಡಪ್ಪ ಮೃತ ಪಟ್ಟಿದ್ದಾರೆ. ಕ್ರಯಪತ್ರದ ದೃಢೀಕೃತ ಪ್ರತಿಯನ್ನು ಹಾಜರು ಮಾಡಿದ್ದೇವೆ. ಸದರಿ ಎರಡೂಕಾಲು ಗುಂಟೆಗೆ ಏನು ಚೆಕ್ಕುಬಂದಿ ಕೊಟ್ಟಿದ್ದಾರೆ ಎಂದು ವಾದಿಗಳಾದ ನಾವು ತಿಳಿದುಕೊಂಡಿದ್ದೇವೆಯೇ? ಎಂದರೆ ಪೂರ್ವಕ್ಕೆ ನನ್ನ ತಂದೆ ಕೃಷ್ಣಪ್ಪನವರ ಜಮೀನು, ಪಶ್ಚಿಮಕ್ಕೆ 10 ಅಡಿ ರಸ್ತೆ, ಉತ್ತರಕ್ಕೆ 2ನೇ ಪ್ರತಿವಾದಿಯ ಉಳಿಕೆ ಸ್ವತ್ತು ಮತ್ತು ದಕ್ಷಿಣಕ್ಕೆ ನನ್ನ ತಂದೆಯ ಜಮೀನು ಇವೆ ಎಂದು ಸದರಿ ಕ್ರಯಪತ್ರದಲ್ಲಿ ನಮೂದಿಸಲಾಗಿರುತ್ತದೆ. 7 ಮತ್ತು 8ನೇ ಪ್ರತಿವಾದಿಗಳು ಕೂಡ ನಮ್ಮ ಕುಟುಂಬ ಸದಸ್ಯರಲ್ಲ. 2 ಮತ್ತು 3ನೇ ಪ್ರತಿವಾದಿಗಳು ನಮ್ಮ ಜಮೀನಿನ ಪಕ್ಕದಲ್ಲೇ 7 ಮತ್ತು 8ನೇ ಪ್ರತಿವಾದಿಗಳಿಗೆ ಸೈಟ್ ಮಾರಾಟ ಮಾಡಿರುವುದರಿಂದ ಅವರನ್ನು ಕೂಡ ದಾವೆಗೆ ಸೇರಿಸಿದ್ದೇವೆ. 7ನೇ ಪ್ರತಿವಾದಿ ಪರವಾಗಿ ಎರಡು ಗುಂಟೆ ಮತ್ತು 8ನೇ ಪ್ರತಿವಾದಿಗೆ ಕೂಡ ಎರಡು ಗುಂಟೆ ಮಾರಾಟ ಮಾಡಿದ್ದಾರೆ. 7 ಮತ್ತು 8ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿದ ಜಮೀನುಗಳ ಚೆಕ್ಕುಬಂದಿಗಳನ್ನು ನನಗೆ ಕರೆಕ್ಟ್ ಆಗಿ ಹೇಳಲು ಬರುವುದಿಲ್ಲ. ಈಗ ಸದರಿ ಎರಡು ಜಮೀನುಗಳಿಗೆ ಸರ್ವೆ ನಂ.28-18 ಮತ್ತು 28-19 ಎಂಬ ನಂಬರ್ ಕೊಡಲಾಗಿದೆ. 1, 7 ಮತ್ತು 8ನೇ ಪ್ರತಿವಾದಿಗಳ ವಿರುದ್ಧ ನಾವು ಯಾವುದೇ ಪರಿಹಾರ ಕೋರಿಲ್ಲ ಎಂದರೆ ಎಲ್ಲಾ ಪ್ರತಿವಾದಿಗಳನ್ನು ಸೇರಿಸಿಯೇ ಪರಿಹಾರ ಕೇಳಿದ್ದೇವೆ. ಈ ದಾವೆಯಲ್ಲಿ ಯಾರು ಯಾರು ಮನೆಗಳನ್ನು ಕಟ್ಟಿದ್ದಾರೆ ಎಂದರೆ 2ನೇ ಪ್ರತಿವಾದಿ ಮನೆ ಕಟ್ಟಿದ್ದಾರೆ. 2ನೇಪ್ರತಿವಾದಿ ತನಗೆ

ಸಂಬಂಧಪಟ್ಟ ಜಮೀನಿನಲ್ಲೇ ಮನೆ ಕಟ್ಟಿದ್ದಾರೆ ಎಂದರೆ ಇಲ್ಲ, ನನ್ನ ಜಮೀನಿನಲ್ಲಿ ಕಟ್ಟಿದ್ದಾರೆ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಿತು**).**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ.